ಕೂರಿಗೇಪಲ್ಲಿ ಗ್ರಾಮಗಳಲ್ಲಿ ಹೊಸದಾಗಿ ಪಶುವೈದ್ಯಕೀಯ ಕೇಂದ್ರಗಳನ್ನು ಪ್ರಾರಂಭಿಸುವ ಉದ್ದೇಶ ಇರುವುದಿಲ್ಲ.

ಪಿ.ಎಂ.ಜಿ.ಎಸ್.ವೈ. ಯೋಜನೆ

492 (970) ಶ್ರೀ ವೆಂಕಟಶಿವಾರೆಡ್ಡಿ, ಜಿ. ಕೆ. (ಶ್ರೀನಿವಾಸಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೇಂದ್ರ ಸರ್ಕಾರದಿಂದ 2010–11ನೇ ಸಾಲಿಗೆ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು (ವಿವರ ಒದಗಿಸುವುದು);

ಆ) ಪ್ರಸಕ್ತ ಸಾಲಿಗೆ ಸದರಿ ಯೋಜನೆಯಡಿ ಅನುದಾನ ಬಿಡುಗಡೆಯಾಗದಿದ್ದ ಪಕ್ಷದಲ್ಲಿ ಸರ್ಕಾರವು ಅನುದಾನ ಬಿಡುಗಡೆ ಸಂಬಂಧ ತೆಗೆದುಕೊಂಡ ಕ್ರಮವೇನು (ವಿವರ ಒದಗಿಸುವುದು);

ಇ) ಹಾಗಿದ್ದಲ್ಲಿ, ಶ್ರೀನಿವಾಸಪುರ ಮತಕ್ಷೇತ್ರದಲ್ಲಿ 2010–11ನೇ ಸಾಲಿಗೆ ಪಿ.ಎಂ.ಜಿ.ಎಸ್.ವೈ. ಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು (ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ 2010–11ನೇ ಸಾಲಿನಲ್ಲಿ ರೂ. 226.11 ಕೋಟಿ ಅನುದಾನ ಬಿಡುಗಡೆ ಆಗಿದೆ.

ಆ) ಪ್ರಸಕ್ತ ಸಾಲಿಗೆ ಸದರಿ ಯೋಜನೆಯಡಿ ಅನುದಾನ ಬಿಡುಗಡೆ ಕೋರಿ ದಿನಾಂಕ 25–2–2010 ಹಾಗೂ 12–3–2010 ಹಾಗೂ 3–5–2010ರ ಇಲಾಖಾ ಪತ್ರಗಳಲ್ಲಿ ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಲಾಗಿದೆ.

ಇ) ಶ್ರೀನಿವಾಸಪುರ ಮತ ಕ್ಷೇತ್ರದಲ್ಲಿ ಒಟ್ಟಾರೆ 7 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪ್ರಸಕ್ತ 2010–11ನೇ ಸಾಲಿನಲ್ಲಿ ಒಟ್ಟು ರೂ. 509.85 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ವಿವರ ಕೆಳಕಂಡಂತಿದೆ.

ಕ್ರ.ಸಂ.	ಹಂತ	ಪ್ಯಾಕೇಜ್ ಸಂ.	2010–11ರಲ್ಲಿ ಬಿಡುಗಡೆಯಾದ ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ)
1	ಹಂತ–8, ಬ್ಯಾಚ್ 1	KN-19-93	106.71
2	ಹಂತ–8, ಬ್ಯಾಚ್ 2	KN-19-103	15.70
3	ಹಂತ–8, ಬ್ಯಾಚ್ 2	KN-19-104	82.11
4	ಹಂತ–8, ಬ್ಯಾಚ್ 2	KN-19-105	86.56
5	ಹಂತ–8, ಬ್ಯಾಚ್ 2	KN-19-106	60.05
6	ಹಂತ–8, ಬ್ಯಾಚ್ 2	KN-19-107	78.89
7	ಹಂತ–8, ಬ್ಯಾಚ್ 2	KN-19-108	79.83
		ಒಟ್ಟು	509.85

ಪ್ರೌಢಶಾಲೆ ಮಂಜೂರಾತಿ

493 (504) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದೇವನಹಳ್ಳಿ ತಾಲ್ಲೂಕಿಗೆ ಪ್ರಸಕ್ತ ಸಾಲಿನಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ;

ಆ) ಪ್ರೌಢಶಾಲೆಗಳ ನಿರ್ಮಾಣಕ್ಕಾಗಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ;

ಇ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಯಾವುದೂ ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ